# ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ.) ಬೆಂಗಳೂರು

ನಂ. **101, 11**ನೇ ಅಡ್ಡರಸ್ತೆ, **8**ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - **560 003.**
ದೂರವಾಣಿ : 23348193, 41128498, E-mail : havyakmahasabha@rediffmail.com

## SRI AKHILA HAVYAKA MAHASABHA (REGD.) BANGALORE

101, 11th Cross, 8th Main, Malleshwaram,Bangalore - 560 003.
Phone : 23348193, 41128498, Website : www.havyakamahasabha.com

XXXXXXXX
ನೋಂ. ಸಂ. 305/1943


1/11/17
ಚುನಾವಣಾಧಿಕಾರಿಗಳ ಕಛೇರಿ

ದಿನಾಂಕ : **01.11.2017**

### ಅಧಿಸೂಚನೆ

ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ.) ಬೆಂಗಳೂರಿನ ಆಡಳಿತ ಮಂಡಳಿಯ 2016–17ನೇ ಸಾಲಿಗೆ ತೆರವಾಗುವ ಸ್ಥಾನಗಳಿಗೆ ನಿರ್ದೇಶಕರನ್ನು ಚುನಾಯಿಸಲು ನಾಮಪತ್ರಗಳನ್ನು ಈ ಮೂಲಕ ಕರೆಯಲಾಗಿದೆ. ತೆರವಾದ ಸ್ಥಾನಗಳ ವಿವರ, ಚುನಾವಣೆಯ ನಿಯಮಾವಳಿಗಳು ಹಾಗೂ ಚುನಾವಣಾ ವೇಳಾಪಟ್ಟಿ ಈ ಕೆಳಗಿನಂತೆ ಇರುತ್ತದೆ.

### ಪ್ರಸ್ತುತ 2017–18ನೇ ಸಾಲಿಗೆ ನಿವೃತ್ತರಾಗುವ ನಿರ್ದೇಶಕರ ಯಾದಿ ಮತ್ತು ಕ್ಷೇತ್ರಗಳ ವಿವರ

**ಬೆಂಗಳೂರು ಕ್ಷೇತ್ರ – 4 ಸ್ಥಾನಗಳು**

1. ಶ್ರೀ ಯು.ಎಸ್ ಹೆಗಡೆ
2. ಶ್ರೀ ಮುಗಲೋಡಿಕೃಷ್ಣಮೂರ್ತಿ
3. ಶ್ರೀ ಪ್ರಶಾಂತಕುಮಾರ ಭಟ್ಟ
4. ಶ್ರೀ ಪ್ರಕಾಶ ಕೆ ವಿ

**ಉತ್ತರ ಕನ್ನಡ ಕ್ಷೇತ್ರ– 2 ಸ್ಥಾನಗಳು**

1. ಶ್ರೀ ವಿ ಎಮ್ ಹೆಗಡೆ ಕಾರವಾರ ,
2. ಶ್ರೀ ಜಿ.ಎಸ್. ಹೆಗಡೆ

**ಶಿವಮೊಗ್ಗ ಕ್ಷೇತ್ರ– 2 ಸ್ಥಾನಗಳು**

1. ಶ್ರೀ ಕೆ.ಆರ್. ಶ್ರೀಧರ ಭಟ್ ಕಲಸೆ
2. ಶ್ರೀ ಎಸ್ ಆರ್ ಹೆಗಡೆ .

**ದಕ್ಷಿಣ ಕನ್ನಡ ಕ್ಷೇತ್ರ– 5 ಸ್ಥಾನಗಳು**

1. ಶ್ರೀ ಬಿ. ಶಿವಶಂಕರ ಭಟ್
2. ಶ್ರೀ ಕಜೆ ಈಶ್ವರ ಭಟ್
3. ಶ್ರೀ ಕೆ. ಸುಬ್ರಹ್ಮಣ್ಯ ಶಾಸ್ತ್ರಿ
4. ಶ್ರೀ ಆನೇಕಾರ್ ಗಣಪಯ್ಯ
5. ಶ್ರೀ ಪಿ ಈಶ್ವರ ಭಟ್ಟ .

**ಹಾಸನ–ಚಿಕ್ಕಮಗಳೂರು ಕ್ಷೇತ್ರ – 1 ಸ್ಥಾನ**

1. ಶ್ರೀ ವೆಂಕಟ್ರಮಣ ಭಟ್ಟ ಹಾಸನ

**ಕರ್ನಾಟಕದ ಇತರೆ ಪ್ರದೇಶ – 1 ಸ್ಥಾನ**

1. ಶ್ರೀ ವಿ ಎಸ್ ಭಟ್ಟ ಹುಬ್ಬಳ್ಳಿ

**ಹವ್ಯಕ ಸಂಘ – ಸಂಸ್ಥೆಗಳಿಂದ – 1 ಸ್ಥಾನ**

1. ಶ್ರೀ ಸದಾನಂದ ಭಟ್ (ಹವ್ಯಕ ಅಭಿವೃದ್ಧಿ ಸಂಘ ಹೊನ್ನಾವರ)

ಮಹಾಸಭೆಯ ನೋಂದಾಯಿತ ನಿಯಮಾವಳಿಗಳ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಬಳಸಿ ದಿನಾಂಕ:29–10–2017ರಂದು ನಡೆದ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿ ಜಂಟಿ ಸಭೆಯಲ್ಲಿ ಅನುಮೋದಿಸಲ್ಪಟ್ಟ ಠರಾವಿನಂತೆ, ಆಡಳಿತ ಮಂಡಳಿಯ ಚುನಾವಣಾ ಪ್ರಕ್ರಿಯೆ ಈ ಕೆಳಗಿನಂತೆ ರೂಪಿಸಲಾಗಿದೆ.

### ನಿಯಮಾವಳಿಗಳು

1. ಚುನಾವಣೆಯಲ್ಲಿ ಸ್ಪರ್ಧಿಸಬಯಸುವ ಅಭ್ಯರ್ಥಿಗಳು ದಿನಾಂಕ: 31–10–2017ರಂದು ಮಹಾಸಭೆಯ ಸದಸ್ಯರಾಗಿ ಕನಿಷ್ಠ 2 ವರ್ಷಗಳು ಪೂರ್ತಿಯಾಗಿರತಕ್ಕದ್ದು.
2. ಚುನಾವಣೆಯಲ್ಲಿ ಸ್ಪರ್ಧಿಸಬಯಸುವ ಅಭ್ಯರ್ಥಿಗಳು ರೂ. 100/–ನ್ನು ನಗದಾಗಿ ಅಥವಾ ಬ್ಯಾಂಕ್ ಸಂದಾಯದ ಮುಖಾಂತರ ಪಾವತಿಸಿ ನಾಮಪತ್ರದ ಪ್ರತಿಯನ್ನು ಮಹಾಸಭೆಯ ಕಾರ್ಯಾಲಯದಲ್ಲಿ ಚುನಾವಣಾ ಅಧಿಕಾರಿಗಳು ಅಥವಾ ಅವರಿಂದ ಅಧಿಕಾರ ಪಡೆದ ಪ್ರತಿನಿಧಿಯಿಂದ ಖುದ್ದಾಗಿ/ಅಥವಾ ಅಂಚೆ ಮುಖಾಂತರ/ ಯಾವುದೇ ರೀತಿಯಲ್ಲಿ ಮಹಾಸಭೆಯಲ್ಲಿ ನೊಂದಾಯಿಸಿ ಪಡೆಯತಕ್ಕದ್ದು ಮತ್ತು ಅದೇ ಪ್ರತಿಯನ್ನು ನಾಮಪತ್ರವಾಗಿ ವಾಪಾಸು ಸಲ್ಲಿಸತಕ್ಕದ್ದು. (ನಾಮಪತ್ರದ ಶುಲ್ಕ ರೂ.100/– ನ್ನು ಮರುಪಾವತಿಸಲಾಗುವುದಿಲ್ಲ.)

3. ಎಲ್ಲಾ ರೀತಿಯಲ್ಲಿ ಭರ್ತಿ ಮಾಡಿದ ನಾಮಪತ್ರವನ್ನು ಮೊಹರು ಮಾಡಿದ ಲಕೋಟೆಯೊಂದಿಗೆ " **ಚುನಾವಣಾಧಿಕಾರಿಗಳು, ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು** " ಇವರ ಹೆಸರಿಗೆ ನಿಗದಿಪಡಿಸಿದ ಸಮಯದೊಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

4. ನಾಮಪತ್ರದ ಜೊತೆಯಲ್ಲಿ ಭದ್ರತಾ ಠೇವಣಿಯಾಗಿ ರೂ.5000/– ಗಳನ್ನು ನಗದು ಅಥವಾ ' ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು ' ಹೆಸರಿನಲ್ಲಿ D.D.ರೂಪದಲ್ಲಿ ಸಲ್ಲಿಸತಕ್ಕದ್ದು

5. ಚುನಾವಣೆಯಲ್ಲಿ ಪರಾಜಿತ ಅಭ್ಯರ್ಥಿಯು ಒಟ್ಟು ಚಲಾಯಿತ ಮತಗಳ ಶೇಕಡಾ 10 ಕ್ಕಿಂತ ಕಡಿಮೆ ಮತಗಳನ್ನು ಪಡೆದಿದ್ದಲ್ಲಿ ಈ ರೀತಿ ಪಡೆದ ಅಭ್ಯರ್ಥಿಯ ಭದ್ರತಾ ಠೇವಣಿ 5000/–ರೂ.ಗಳನ್ನು ಮರುಪಾವತಿಸಲಾಗುವುದಿಲ್ಲ. ಉಳಿದಂತೆ ಚುನಾಯಿತರಾದ ಅಭ್ಯರ್ಥಿಗಳ ಠೇವಣಿ ಹಣವನ್ನು ಚೆಕ್ ಮುಖಾಂತರ ವಾಪಾಸು ಮಾಡಲಾಗುವುದು.

6. ಚುನಾವಣೆಗೆ ಸ್ಪರ್ಧಿಸಬಯಸುವ ಅಭ್ಯರ್ಥಿಗಳು ಯಾವ ಕ್ಷೇತ್ರದಿಂದ ಸ್ಪರ್ಧಿಸಬಯಸುತ್ತಾರೋ ಅದೇ ಕ್ಷೇತ್ರದ ವಾಸಿಗಳಾಗಿರಬೇಕು ಮತ್ತು ಅವರು ತಮ್ಮ ವಾಸಸ್ಥಳದ ದೃಢೀಕರಣದ ಬಗ್ಗೆ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೊಂದು ದಾಖಲೆಯ (ಮತದಾರರ ಗುರುತಿನ ಚೀಟಿ / ಪಡಿತರ ಚೀಟಿ/ ಆಧಾರ್ ಚೀಟಿ ಇತ್ಯಾದಿ) ಪ್ರತಿಯನ್ನು ತಮ್ಮ ಉಮೇದುವಾರಿಕೆ ಪತ್ರದೊಡನೆ ಲಗತ್ತಿಸಬೇಕು. ಒಮ್ಮೆ ಅಂತಹ ದಾಖಲೆಗಳು ಸರಿ ಇರದ ಪಕ್ಷದಲ್ಲಿ ಚುನಾವಣಾಧಿಕಾರಿಗಳು ಅಂತಹ ಉಮೇದುವಾರಿಕೆ ಪತ್ರವನ್ನು ತಿರಸ್ಕರಿಸಲು ಅಧಿಕಾರ ಹೊಂದಿರುತ್ತಾರೆ. ಅಭ್ಯರ್ಥಿಯ ವಿಳಾಸ ಮಹಾಸಭೆಯಲ್ಲಿರುವ ಮತದಾರರ ಯಾದಿಗೆ ತಾಳೆಯಾಗತಕ್ಕದ್ದು.

7. ಉಮೇದುವಾರಿಕೆ ಪತ್ರವನ್ನು(ನಾಮಪತ್ರ) ಒಬ್ಬ ಸದಸ್ಯರು ಸೂಚಿಸಬೇಕು. ಮತ್ತೊಬ್ಬ ಸದಸ್ಯರು ಅನುಮೋದಿಸಬೇಕು. ಅಂತಹ ಸದಸ್ಯರುಗಳು ಅಭ್ಯರ್ಥಿಯು ಯಾವ ಕ್ಷೇತ್ರದಿಂದ ಸ್ಪರ್ಧಿಸಬಯಸುತ್ತಾರೋ ಆ ಕ್ಷೇತ್ರದ ನಿವಾಸಿಗಳಾಗಿರಬೇಕು ಮತ್ತು ಮಹಾಸಭೆಯ ಸದಸ್ಯರಾಗಿ 31–10–2017ಕ್ಕೆ ಎರಡು ವರ್ಷಗಳಾಗಿರಬೇಕು. ಸೂಚನೆ ಮತ್ತು ಅನುಮೋದನೆಯನ್ನು ಆಯಾ ಕ್ಷೇತ್ರಕ್ಕೆ ಬೇಕಾಗಿರುವ ಗರಿಷ್ಠ ಸ್ಥಾನಗಳಿಗಷ್ಟೆ ಮಾಡಬಹುದು. ಒಬ್ಬ ಸದಸ್ಯ ನಿಗದಿತ ಸ್ಥಾನಗಳಿಗಿಂತ ಹೆಚ್ಚು ಅಭ್ಯರ್ಥಿಗಳಿಗೆ ಸೂಚಿಸುವದು ಯಾ ಅನುಮೋದಿಸುವದು ಮಾಡಿದ್ದಲ್ಲಿ ಅವರು ಸೂಚಿಸಿದ ಯಾ ಅನುಮೋದಿಸಿದ ಎಲ್ಲಾ ಅಭ್ಯರ್ಥಿಗಳ ನಾಮಪತ್ರವು ತಿರಸ್ಕೃತವಾಗುವದು. ಒಬ್ಬ ಆಭ್ಯರ್ಥಿಯು ಒಂದು ಕ್ಷೇತ್ರದಲ್ಲಿ ಮಾತ್ರ ಸ್ಪರ್ಧಿಸಬಹುದು.

8. ಚುನಾವಣೆಯಲ್ಲಿ ಸ್ಪರ್ಧಿಸಬಯಸುವವರು ಮಹಾಸಭೆಯ ಮತದಾರರ ಯಾದಿಯನ್ನು ಈ ಕೆಳಗೆ ನಿಗದಿಪಡಿಸಿದ ಮೊತ್ತವನ್ನು ಪಾವತಿಸಿ ಮಹಾಸಭೆಯ ಕಾರ್ಯಾಲಯದಿಂದ ಪಡೆಯಬಹುದು.
   ಅ) ಸಮಗ್ರ ಯಾದಿ ರೂ.6000/–
   ಆ) ಜಿಲ್ಲಾವಾರು ಯಾದಿ ರೂ.2000/–

9. ನಾಮಪತ್ರವನ್ನು ಹಿಂದಕ್ಕೆ ಪಡೆಯಬಯಸುವ ಅಭ್ಯರ್ಥಿ ನಿರ್ದಿಷ್ಟ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.

10. 29.10.2017ರ ಒಳಾಗಾಗಿ ಸದಸ್ಯತ್ವ ಹೊಂದಿದ್ದವರಿಗೆ ಮಾತ್ರ ಮತ ಚಲಾಯಿಸಲು ಅಧಿಕಾರ ಇರುತ್ತದೆ.

**<u>ಚುನಾವಣಾ ವೇಳಾಪಟ್ಟಿ</u>**

1. ನಾಮಪತ್ರದ ಅರ್ಜಿ ನಮೂನೆ ವಿತರಣೆ ಪ್ರಾರಂಭದ ದಿನಾಕ: 01.11.2017 ಬೆಳಗ್ಗೆ 10 ಗಂಟೆಯಿಂದ
2. ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ: 20.11.2017 ಸಂಜೆ 6.00 ಗಂಟೆಯವರೆಗೆ. ಈ ನಿಗದಿತ ಸಮಯದಲ್ಲಿ ನಾಮಪತ್ರವು ಮಹಾಸಭೆಯ ಕಛೇರಿಯಲ್ಲಿ ಸ್ವೀಕೃತವಾಗಿರಬೇಕು.
3. ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ: 22.11.2017 ಸಂಜೆ 6.00 ಗಂಟೆಗೆ
4. ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆಯ ದಿನಾಂಕ: 30.11.2017 ಸಂಜೆ 4.00 ಗಂಟೆಯವರೆಗೆ.
5. ನಾಮಪತ್ರ ಅಂತಿಮ ಪಟ್ಟಿಯ ಪ್ರಕಟಣೆ ದಿನಾಂಕ: 30.11.2017 ಸಂಜೆ 6.00 ಗಂಟೆಗೆ
6. ಚುನಾವಣೆ ದಿನಾಂಕ (ಅಗತ್ಯವಿದ್ದಲ್ಲಿ) : 17.12.2017 ಬೆಳಿಗ್ಗೆ 8.00 ರಿಂದ 4.00 ಗಂಟೆಯವರೆಗೆ.
7. ಚುನಾವಣಾ ಫಲಿತಾಂಶ ಓದಿ ಹೇಳುವ ದಿನಾಂಕ: 17.12.2017

1/11/17
ಚುನಾವಣಾಧಿಕಾರಿಗಳ ಕಛೇರಿ

ಶ್ರೀ.ಜಿ.ಕೆ.ಭಟ್ಟ (ವಕೀಲರು)
ಚುನಾವಣಾಧಿಕಾರಿ